೧೨–೦೦ ಪಿ. ಎಂ.

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ನೀಡಲಾದ ಲಿಖಿತ ಉತ್ತರಗಳು

ಶ್ರೀ ಟಿ. ಎನ್. ನರಸಿಂಹಮೂರ್ತಿ (ವಸತಿ, ನಗರಾಭಿವೃದ್ಧಿ, ಬಂದರು, ಮೀನುಗಾರಿಕೆ ಸಚಿವರು).—ಮಾನ್ಯ ಅಧ್ಯಕ್ಷರೆ, ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳ ಪಟ್ಟಿಯನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಕೃಷಿ ಸಹಾಯಕರ ವಸತಿ ಗೃಹಗಳು

೫೯೮ ಶ್ರೀಮತಿ ಮೋಟಪ್ಪ (ಮೂಡಿಗೆರೆ).—ಮಾನ್ಯ ವ್ಯವಸಾಯ ಮತ್ತು ತೋಟಗಾರಿಕೆ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿರುವ ಕೃಷಿ ಇಲಾಖೆಯ ವಸತಿಗೃಹಗಳ ಒಟ್ಟು ಸಂಖ್ಯೆ ಎಷ್ಟು ? (ಜಿಲ್ಲಾವಾರು ಮತ್ತು ತಾಲ್ಲೂಕುವಾರು ವಿವರಗಳನ್ನು ನೀಡುವುದು)

ಆ) ಆ ಪೈಕಿ ಕೃಷಿ ಸಹಾಯಕಾಧಿಕಾರಿಗಳ ವಸತಿಗೃಹಗಳೆಷ್ಟು ? (ತಾಲ್ಲೂಕುವಾರು ವಿವರಗಳನ್ನು ನೀಡುವುದು)

ಇ) ಮೂಡಿಗೆರೆ ತಾಲ್ಲೂಕಿನಲ್ಲಿರುವ ಇಂತಹ ವಸತಿಗೃಹಗಳನ್ನು ಕಟ್ಟಿಸಿದ್ದು ಯಾವಾಗ ಹಾಗೂ ಮಾಡಲಾದ ವೆಚ್ಚವೆಷ್ಟು ?

ಈ) ಈ ವಸತಿಗೃಹಗಳನ್ನು ಹಂಚಿಕೆ ಮಾಡಲಾಗಿದೆಯೇ, ಹಂಚಿಕೆ ಮಾಡಿಲ್ಲದಿದ್ದಲ್ಲಿ ಅದಕ್ಕೆ ಕಾರಣವೇನು ?

ಶ್ರೀ ಎಸ್. ಬಂಗಾರಪ್ಪ (ಕೃಷಿ ಮತ್ತು ತೋಟಗಾರಿಕೆ ಸಚಿವರು).—

ಅ) ಮತ್ತು ಆ) ರಾಜ್ಯದಲ್ಲಿರುವ ಕೃಷಿ ಇಲಾಖೆಯ ವಸತಿಗೃಹಗಳ ಒಟ್ಟು ಸಂಖ್ಯೆ : ೧೮೩೬ ಇದರಲ್ಲಿ ಕೃಷಿ ಸಹಾಯಕರ ವಸತಿಗೃಹಗಳು ೧೦೭೪. (ಜಿಲ್ಲಾವಾರು ಮತ್ತು ತಾಲ್ಲೂಕುವಾರು ವಿವರಗಳಿರುವ ಪಟ್ಟಿಯನ್ನು ಸದನದ ಮೇಜಿನ ಮೇಲೆ ಇಡಲಾಗಿದೆ)

ಇ) ಮೂಡಿಗೆರೆ ತಾಲ್ಲೂಕಿನಲ್ಲಿರುವ ವಸತಿಗೃಹಗಳನ್ನು ೧೯೮೫ ರಿಂದ ೧೯೮೯ರ ಅವಧಿಯಲ್ಲಿ ಕಟ್ಟಿಸಲಾಗಿದೆ. ಈ ಕಟ್ಟಡಗಳಿಗೆ ತಗುಲಿರುವ ಒಟ್ಟು ವೆಚ್ಚ ರೂ. ೧,೮೨,೯೯೦–೦೦

ಈ) ಮೂಡಿಗೆರೆ ತಾಲ್ಲೂಕಿನಲ್ಲಿ ಒಟ್ಟು ೪ ವಸತಿಗೃಹಗಳನ್ನು ಕಟ್ಟಲಾಗಿದ್ದು, ಇವುಗಳ ಪೈಕಿ ೩ ವಸತಿಗೃಹಗಳನ್ನು ಹಂಚಲಾಗಿದೆ. ಉಳಿದ ಒಂದು ವಸತಿಗೃಹವನ್ನು ಕೃಷಿ ಸಹಾಯಕರ ಹುದ್ದೆ ಖಾಲಿ ಇರುವುದರಿಂದ ಹಂಚಲಾಗಿರುವುದಿಲ್ಲ.

ಬೆಳಗಾವಿ ನಗರಪಾಲಿಕೆಯ ಕಛೇರಿಯ ಮೇಲೆ ರಾಷ್ಟ್ರಧ್ವಜದೊಂದಿಗೆ ಇರುವ ಭಗವಾ ಧ್ವಜ ತೆಗೆಯುವ ಬಗ್ಗೆ

೪೪೨. ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ).—ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬೆಳಗಾವಿ ನಗರಪಾಲಿಕೆಯ ಕಟ್ಟಡದ ಮೇಲೆ ರಾಷ್ಟ್ರಧ್ವಜ ಮತ್ತು ಭಗವಾ ಧ್ವಜ ಹಾರಿಸುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ ?

ಆ) ಸರ್ಕಾರಿ ಕಟ್ಟಡ ಹಾಗೂ ನಗರಪಾಲಿಕೆಯ ಮೇಲೆ ರಾಷ್ಟ್ರಧ್ವಜದ ಸಂಗಡ ಬೇರೆ ಪಕ್ಷಗಳ ಧ್ವಜ ಹಾಗೂ ಭಗವಾ ಧ್ವಜ ಹಾರಿಸುವುದು ನಿಯಮ ಬಾಹಿರವಲ್ಲವೆ ?

ಇ) ಹಾಗಿದ್ದಲ್ಲಿ ಆ ಭಗವಾ ಧ್ವಜ ತೆಗೆಯಿಸಲು ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಶ್ರೀ ಟಿ. ಎನ್. ನರಸಿಂಹಮೂರ್ತಿ (ವಸತಿ ಮಂತ್ರಿ ನಗರಾಭಿವೃದ್ಧಿ ಸಚಿವರು).—

ಅ) ಬಂದಿದೆ

ಆ) ಭಾರತದ ಧ್ವಜನಿಯಮದ ಮೇರೆಗೆ ರಾಷ್ಟ್ರೀಯ ಧ್ವಜಕ್ಕಿಂತ ಮೇಲ್ಮಗಡೆ ಅಥವಾ ಎತ್ತರಕ್ಕೆ ಬೇರೆ ಯಾವುದೇ ಧ್ವಜವನ್ನು ಹಾರಿಸುವುದು ಹಾಗೂ ವಿಶ್ವಸಂಸ್ಥೆಯ ಧ್ವಜ ಅಥವಾ ಬೇರೆ ದೇಶಗಳ ಧ್ವಜಗಳನ್ನು ಹೊರತುಪಡಿಸಿ ಬೇರೆ ಯಾವುದೇ ಧ್ವಜವನ್ನು ರಾಷ್ಟ್ರೀಯ ಧ್ವಜದ ಪಕ್ಕದಲ್ಲಿ ಹಾರಿಸಕೂಡದು ಎಂಬ ನಿಯಮವಿದೆ. ಆದರೆ ಧ್ವಜನಿಯಮವು ಭಾರತ ಸರಕಾರದ ಅಥವಾ ರಾಜ್ಯ ಸರ್ಕಾರದ ಕಾಯ್ದೆ ಆಗಿರುವುದಿಲ್ಲ.

ಇ) ಈ ಪ್ರಸ್ತಾವನೆ ಪರಿಶೀಲನೆಯಲ್ಲಿದೆ.

ಬಿಜಾಪುರ ಜಿಲ್ಲೆಯಲ್ಲಿ ಮಂಜೂರಾದ ಖಾಸಗಿ ಪ್ರೌಢ ಶಾಲೆಗಳ ಬಗ್ಗೆ

೫೫೦ ಶ್ರೀ ಬಿ. ಎಸ್. ಪಾಟೀಲ, (ಸಾಸನೂರು).—ಪೌನ್ಯ ಶಿಕ್ಷಣ, ಯುವಜನ ವ್ಯವಹಾರಗಳು, ಕ್ರೀಡೆಗಳು ಕನ್ನಡ, ಹಾಗೂ ಸಂಸ್ಕೃತಿ ಮಂತ್ರಿಗಳಿಂ ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬಿಜಾಪುರ ಜಿಲ್ಲೆಯಲ್ಲಿ ೧೯೮೫ ಜೂನ್ ನಿಂದ ಮಂಜೂರಾದ (ವರ್ಷವಾರು ತಾಲ್ಲೂಕು ವಾರು ಮತ್ತು ವ್ಯವಸ್ಥಾಪಕ ಮಂಡಳಿಗಳ ವಿವರಗಳೊಂದಿಗೆ) ಖಾಸಗಿ ಪ್ರೌಢಶಾಲೆಗಳೆಷ್ಟು ?

ಆ) ಅವುಗಳ ಪೈಕಿ ಅನುದಾನ ರಹಿತ ಅವಧಿ ಪೂರ್ತಿಗೊಳಿಸಿದ ಎಲ್ಲಾ ಪ್ರೌಢಶಾಲೆ ಅವಧಿ ಮುಗಿದ ದಿನಾಂಕಗಳಿಂದ ಅನುದಾನ ನೀಡಲಾಗುತ್ತಿದೆಯೇ,?

ಇ) ನೀಡದಿದ್ದಲ್ಲಿ ಅದಕ್ಕೆ ಕಾರಣಗಳೇನು ?

ಶ್ರೀ ಕೆ. ಹೆಚ್. ರಂಗನಾಥ್ (ಶಿಕ್ಷಣ, ಯುವಜನ ವ್ಯವಹಾರಗಳು, ಕ್ರೀಡೆಗಳು, ಕನ್ನಡ ಹಾಗೂ ಸಂಸ್ಕೃತಿ ಮಂತ್ರಿಗಳು).—

ಅ)

೧೯೮೫–೮೬	೩೭ ಖಾಸಗಿ ಪ್ರೌಢಶಾಲೆಗಳು
೧೯೮೬–೮೭	೦೩ (ತಾಲ್ಲೂಕುವಾರು ಮಂಡಲಿಗಳ ವಿವರಗಳ ಪಟ್ಟಿ ಲಗತ್ತಿಸಿದೆ)
೧೯೮೭–೮೮	—
೧೯೮೮–೮೯	೦೨
೧೯೮೯–೯೦	೨೭
ಒಟ್ಟು	೬೯

ಆ) ೧೯೮೫–೮೬ರಲ್ಲಿ ೧೧ ಪರಿಶಿಷ್ಟ ಜಾತಿ ಖಾಸಗಿ ಪ್ರೌಢಶಾಲೆಗಳನ್ನು ಅನುದಾನಕ್ಕೆ ಒಳಪಡಿಸಲಾಗಿದೆ. ಉಳಿದ ಶಾಲೆಗಳಿಗೆ (ಸಾಮಾನ್ಯ) ೭ ವರ್ಷ ಅವಧಿ ಪೂರ್ಣವಾಗಿರುವುದಿಲ್ಲ.

ಇ) ಅವಧಿ ಪೂರ್ಣವಾಗಿರುವುದಿಲ್ಲ.